

ಅರಚಿಕೊಂಡಿದ್ದು ಹಾವು ಕಚ್ಚಿದ್ದಕ್ಕಿಂತ ಹೆಚ್ಚಿನ ನೋವು ಎದೆಗೆ ತುಂಬಿಸಿತ್ತು. ಅದು ನೀರು ಹಾವಾಗಿದ್ದರೂ ಅದು ಓಡುವ ವೇಗ, ದಢೂತಿ ಆಕಾರವು ನಾಗರ ಹಾವಿನ ವಿಷವನ್ನೂ, ಘನಘೋರ ಸಾವನ್ನೂ ನೆನಪಿಸಿತ್ತು. ಈಗಾಗಲೇ ರಾತ್ರಿ ಹೆಚ್ಚಾಗಿದ್ದ ಕಾರಣ ನಾನು ಹೋಗಿ ರೂಮಿನೊಳಗೆ ಬಿದ್ದುಕೊಂಡೆ. ಹೊರಗೆ ಕೂತವರು ಅರ್ಧ ರಾತ್ರಿ ತನಕ ಮಾತಾಡುತ್ತಲೇ ಇದ್ದರು.

ಬೆಳಗ್ಗೆ ಎದ್ದು ನೋಡುವಾಗ ಹಿಂದಿನ ರಾತ್ರಿ ಸೇರಿದ್ದ ಗುಂಪಿನ ಜನ ಮಾಯವಾಗಿದ್ದರು. ನನಗೆ ಆಕರ್ಷಕ ಎನಿಸಿದ್ದ ಆ ಮುಗುಳ್ನಗೆಯ ಹಿರಿಯ ವ್ಯಕ್ತಿ ಮಾತ್ರ ಉಳಿದಿದ್ದರು. ಕೂತು ಹಕ್ಕಿಗಳ ಪುಸ್ತಕದ ಪುಟ ತಿರುವುತ್ತಿದ್ದರು. ಅವರ ಜೊತೆ ನಿನ್ನೆಯೂ ಇದ್ದ ತರುಣನೂ ಅಲ್ಲಿದ್ದ. ಆತ ಅವರ ಮಗನಿರಬಹುದೆಂದು ಊಹಿಸಿದೆ. ಅವರಿಬ್ಬರೂ ಜೇಡಗಳ ಗುಣ ಸ್ವಭಾವದ ಬಗ್ಗೆ ಚರ್ಚಿಸುತ್ತಿದ್ದರು. ಆ ಹುಡುಗನ ಜೊತೆ ತೀರಾ ಸಲುಗೆಯಿಂದ ಹಿರಿಯರು ಮಾತಾಡುತ್ತಿದ್ದರು. ನಿಸರ್ಗ ಜೀವಿಗಳ ಬಗ್ಗೆ ಅವರ ವಿಷಯ ಪ್ರಬುದ್ಧತೆ ಕಂಡು ಪರಿಚಯ ಮಾಡಿಕೊಳ್ಳುವ ಹಂಬಲ ಹುಟ್ಟಿತು.

ಹಂಪಿಯ ಕುರುಚಲು ಕಾಡಿನ ನಡುವೆ ನಮಗೆ ಆತಿಥ್ಯ ಕೊಟ್ಟಿದ್ದವರು ಪಂಪಯ್ಯ ಸ್ವಾಮಿ. ಇವರು ಪಕ್ಷಿಲೋಕದ ಮತ್ತೊಬ್ಬ ಜೀನಿಯಸ್ ವ್ಯಕ್ತಿ. ಇವರ ಬಳಿ ಈ ಯಜಮಾನರ ಬಗ್ಗೆ ವಿಚಾರಿಸುವುದು ಸೂಕ್ತವೆಂದು ಹೊಳೆದು ಅವರಲ್ಲಿಗೆ ಹೋದೆ. ಮನೆ ಹಿಂದಿನ ನೀರ ಕೊಳದ ಬಳಿ ನಿನ್ನೆ ಸಂಜೆ ಹೋದ ಹಾವು ಎಲ್ಲಾದರೂ ಅಡಗಿ ಕೂತಿದೆಯಾ? ಎಂದು ಪೊಲೀಸರ ರೀತಿ ಪಂಪಯ್ಯ ಹುಡುಕಾಡುತ್ತಿದ್ದರು. ನಾನು ನಡುವೆ ಮುಸುಡಿ ತೂರಿಸಿ ಸ್ವಾಮಿ ಆ ಹಿರಿಯರು ಯಾರು ಎಂದು ಕೇಳಿದೆ.

ಒಮ್ಮೆಗೇ ಪಂಪಯ್ಯರ ಜೀವ ಅರಳಿತು. ಹಾವಿನ ಸುದ್ದಿ ಕೈ ಬಿಟ್ಟು ಸಣ್ಣಗೆ ನಗುತ್ತಾ, ‘ಛೇ ಏನ್ ಸಾರ್